ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ–3)

ಈ) ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ, 2009 ಪರ್ಯಾಲೋಚನಾ ಪ್ರಸ್ತಾವ

ಶ್ರೀ ವಿ. ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ವಿ.ಎಸ್.ಆಚಾರ್ಯ: ಮಾನ್ಯ ಅಧ್ಯಕ್ಷರೆ, ನಾಗರೀಕ ಸಮಾಜದಲ್ಲಿ ಪ್ರಮುಖವಾದಂಥ ಸೇವೆಗಳು, ಸೌಲಭ್ಯಗಳು ಸುಲಲಿತವಾಗಿ ನಡೆಯಬೇಕಾದರೆ ಅದಕ್ಕೆ ಏನಾದರೂ ಒಂದು ಬಗೆಯ ನಿಯಂತ್ರಣ ಬೇಕು ಎನ್ನುವ ದೃಷ್ಟಿಯಿಂದ ಈ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ನಾವು ಇಲ್ಲಿ ತಂದಿದ್ದೇವೆ. ಇದು ಹೊಸದೇನೂ ಅಲ್ಲ, ಹಿಂದೆಯೂ ನಮ್ಮ ರಾಜ್ಯದಲ್ಲಿ ಜಾರಿಯಲ್ಲಿತ್ತು. ಆದರೆ ಅದರ ಅವಧಿ built

in 10 ವರ್ಷವಿದ್ದುದರಿಂದ, 1994 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದಂಥ ಅದು 2004ರಲ್ಲಿ ತಾನಾಗಿಯೇ lapse ಆಯಿತು. ಆಮೇಲೆ ಮತ್ತೊಂದು ಹೊಸ ಕಾನೂನನ್ನು ತರುವಂಥ ಅಗತ್ಯವಿತ್ತು. ಪ್ರಮುಖವಾಗಿ ಇದರಲ್ಲಿ ನಾಲ್ಕು ವಿಷಯಗಳಿವೆ.

(1) ನೀರಿನ ಪೂರೈಕೆಗೆ ಅಡೆತಡೆಯಾಗಬಾರದು

(2) ವಿದ್ಯುಚ್ಛಕ್ತಿ–ಉತ್ಪಾದನೆ, ವಿತರಣೆ ಮತ್ತು ಸಾಗಾಣಿಕೆಗೆ ಅಡ್ಡಿಯಾಗಬಾರದು

(3) ಮೋಟಾರು ವಾಹನಗಳಲ್ಲಿ ಸರಕು ಮತ್ತು ಪ್ರಯಾಣಿಕರನ್ನು ಸಾಗಿಸುವಂಥದ್ದಕ್ಕೆ ನಿರಾಕರಣೆ ಅಥವಾ ಅಡ್ಡಿ ಆತಂಕ ಮಾಡುವಂಥದ್ದರ ವಿರುದ್ಧ

(4) ನಮ್ಮ ರಾಜ್ಯದ ಕರ್ತವ್ಯಗಳು, ಅಂದರೆ ಸಂವಿಧಾನದ 7ನೇ ಲಿಸ್ಟ್‌ನ 2ನೇ ಪಟ್ಟಿಯಲ್ಲಿ ಬರತಕ್ಕಂಥ ವ್ಯಾಪ್ತಿಗೆ ಬರುವಂಥ ಯಾವುದೇ ಒಂದು ಸೇವೆಗೆ ಅಡ್ಡಿಯಾಗುವಂಥದ್ದರ ವಿರುದ್ಧ.

ಮೇಲೆ ಹೇಳಿದ ಯಾವುದೇ ಒಂದು ಸೇವೆಗೆ ಅಡ್ಡಿಯಾಗುವಂಥ ಸಂದರ್ಭವಿದ್ದರೆ ಅದು ಶಿಕ್ಷಾರ್ಹ ಅಪರಾಧ ಎನ್ನುವುದನ್ನು ಇದರಲ್ಲಿ ತಂದಿದ್ದೇವೆ. ಈ ವಿಧೇಯಕದ ಅವಧಿಯೂ 10 ವರ್ಷ ಎಂದು ಇರುತ್ತದೆ. ಇಂಥ ಅಪರಾಧಗಳನ್ನು ಮಾಡಿದವರಿಗೆ ಒಂದು ವರ್ಷ ಸಜೆ ಅಥವಾ 5,000 ದಂಡ ಎಂದು ನಾನು ಒಂದು ತಿದ್ದುಪಡಿಯನ್ನು ಕಳುಹಿಸಿದ್ದೇನೆ. ಇದು ಈ ರೀತಿಯ ಒಂದು ಕಾನೂನಾಗಿದ್ದು ಇದು ಅವಶ್ಯಕವಾಗಿ ಸಿಕ್ಕುವ ಹಾಗೆ ಒಂದು ವ್ಯವಸ್ಥೆ ಮಾಡಿದ ಹಾಗಾಗುತ್ತದೆ ಎನ್ನುವ ಕಾರಣದಿಂದ ಇದನ್ನು ಮಾಡಿದ್ದೇವೆ. ಈ ಬಗ್ಗೆ 1994ರಿಂದ 2004ರವರೆಗೆ ಹಿಂದಿನ ಕಾನೂನು ಇತ್ತು. ಅದು 2004ರಲ್ಲಿ lapse ಆಗಿತ್ತು. ತಮಗೂ ಗೊತ್ತಿದೆ, 2007ರಲ್ಲಿ ಸರಕು ಸಾಗಾಣಿಕೆಯ ಒಂದು ಭಾರೀ ದೊಡ್ಡ Strike ಆದಾಗ ಇದು ನಮ್ಮ ಗಮನಕ್ಕೆ ಬಂತು. ಆನಂತರದಲ್ಲಿ ಒಂದು ಹೊಸ ಕಾನೂನು ತರಬೇಕು ಎನ್ನುವ ದೃಷ್ಟಿಯಿಂದ ಮತ್ತೆ ಅದೇ ಕಾನೂನನ್ನು ಜಾರಿಗೆ ತರುತ್ತಿದ್ದೇವೆ, ಇದರಲ್ಲಿ ಹೊಸದೇನೂ ಇಲ್ಲ.

ಶ್ರೀ ಟಿ.ಬಿ.ಜಯಚಂದ್ರ : ಒಂದು ಸಲ lapse ಆದ ಮೇಲೆ ಮತ್ತೆ ಹೊಸದಾಗಿ ಈ ವಿಧೇಯಕವನ್ನು ತರುತ್ತಿರುವಿರಾ?

ಶ್ರೀ ವಿ.ಎಸ್. ಆಚಾರ್ಯ : ಅದೇ ವಿಧೇಯಕವನ್ನೇ ಮತ್ತೆ ತರುತ್ತಿದ್ದೇವೆ ಅಷ್ಟೇ, ಬೇರೆ ಏನೂ ಇಲ್ಲ.

ಅಧ್ಯಕ್ಷರು : Subject matter same ಇದೆ. ಅದನ್ನು ಮತ್ತೊಮ್ಮೆ introduce ಮಾಡಿದ್ದಾರೆ.

ಶ್ರೀ ವಿ.ಎಸ್.ಆಚಾರ್ಯ : ಇದರಲ್ಲಿ ಅದೇ ವಿಷಯವಿದೆ. ಮೊದಲನೆಯದು, ಸೇವೆಯಲ್ಲಿರುವವರು ಯಾರಾದರೂ ಕೆಲಸ ಮಾಡಲಿಕ್ಕೆ ನಿರಾಕರಣೆ ಮಾಡಿದರೆ, ಎರಡನೆಯದು, ಅಂಥವರಿಗೆ ಪ್ರಚೋದನೆ ಕೊಡುವವರು ಯಾರಾದರೂ ಇದ್ದರೆ, ಮೂರನೆಯದು, ಅಂಥಾದ್ದಕ್ಕೆ ಹಣಕಾಸಿನ ಸಹಾಯ ಮಾಡುವವರು, ಇದೆಲ್ಲವೂ ಶಿಕ್ಷಾರ್ಹ ಅಪರಾಧ ಎಂದಾಗುತ್ತದೆ. ಮತ್ತು ಸೇವೆಯಲ್ಲಿರುವವರಿಗೆ ಸೇವಾ ನಿಯಮಾವಳಿಗಳ ಪ್ರಕಾರ ಕ್ರಮ ತೆಗೆದು ಕೊಳ್ಳಬೇಕು ಎನ್ನುವುದಷ್ಟೇ ಇದೆಯಲ್ಲವೇ ಬೇರೇನೂ ಇಲ್ಲ. ಅಂಥ ಅಪರಾಧಗಳನ್ನು ಮಾಡಿ, ನಾಗರೀಕ ವ್ಯವಸ್ಥೆಗೆ ಆಘಾತಗಳನ್ನು ಉಂಟು ಮಾಡುವವರಿಗೆ ಭಯ ಇರಲಿ ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ : ಇಷ್ಟೆಲ್ಲಾ ಕಾನೂನು ಇದ್ದಾಗ್ಯೂ ಕೂಡ ಇದೇ ರೀತಿಯಾದ ವಿರೋಧಾಭಾಸಗಳು ಇದ್ದೇ ಇರುತ್ತವಲ್ಲ, ಅದನ್ನು ಹತ್ತಿಕ್ಕುವಂಥ ಕೆಲಸವನ್ನು ಕೂಡ ಮಾಡಬೇಕು. ಇನ್ನೊಂದು ವಿಷಯವೆಂದರೆ ಇನ್ನೂ stringent ಆಗಿ ಮಾಡಬೇಕು.

ಶ್ರೀ ವಿ.ಎಸ್. ಆಚಾರ್ಯ : ESMA ಎಂದು ಮುಂಚೆಯೂ ಇತ್ತು. ಕೇಂದ್ರದ ಲಿಸ್ಟ್‌ನಲ್ಲಿರುವಂಥದ್ದಕ್ಕೆ ಅದು ಇದೆ. ಆದರೆ ಇದು ರಾಜ್ಯದ ಲಿಸ್ಟ್‌ನಲ್ಲಿರುವಂಥದ್ದು ಮತ್ತು ಕೆಲವೊಂದನ್ನು Stateಗೆ specific ಆಗಿ ಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ.

ಶ್ರೀ ಸಂಗಣ್ಣ ಕರಡಿ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಇದರಲ್ಲಿ, ವಾರೆಂಟ್ ಇಲ್ಲದೇ ದಸ್ತಗಿರಿ ಮಾಡಲು ಅಧಿಕಾರ ಎಂದು ಇದೆ. ಸಂಶಯ ಪಟ್ಟು ಪೊಲೀಸ್ ಅಧಿಕಾರಿ ವಾರೆಂಟ್ ಇಲ್ಲದೇ ದಸ್ತಗಿರಿ ಮಾಡತಕ್ಕಂಥದ್ದರ ಬಗ್ಗೆ ಮಾನ್ಯ ಗೃಹ ಸಚಿವರು explain ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ವಿ.ಎಸ್.ಆಚಾರ್ಯ : ಇದು ಕೇಂದ್ರದ ಕಾನೂನಿನಲ್ಲಿ ಇರುವಂಥದ್ದು, ಹಿಂದಿನ ನಮ್ಮ ಕಾನೂನಿನಲ್ಲಿ ಇದ್ದಂಥದ್ದು. ವಾರೆಂಟ್ ಇಲ್ಲದೇ ಅರೆಸ್ಟ್ ಮಾಡುವಂಥ ಅಧಿಕಾರ ಇದ್ದರೆ ಮಾತ್ರ ಈ ಕಾನೂನನ್ನು

ಜಾರಿಗೆ ಕೊಡಲಿಕ್ಕೆ ಬರುತ್ತದೆ. ಹಾಗಾಗಿ, ಅದೂ ಸಹ ಕಾನೂನಿನ ಒಂದು ಭಾಗ. ಅದರಲ್ಲಿ ಹೊಸದೇನೂ ಇಲ್ಲ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3 ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 3ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 3ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

(ಖಂಡ 4 ರಿಂದ 6 ರವರೆಗೆ ತಿದ್ದುಪಡಿ)

ಖಂಡ 4 ರಿಂದ 6 ರವರೆಗೆ

ಶ್ರೀ ವಿ.ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡ 4 ರಿಂದ 6 ರವರೆಗೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ;

"ವಿಧೇಯಕದ 4, 5 ಮತ್ತು 6ನೇ ಖಂಡಗಳಲ್ಲಿ "ಎರಡು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿ ಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು."

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"ವಿಧೇಯಕದ 4, 5 ಮತ್ತು 6ನೇ ಖಂಡಗಳಲ್ಲಿ "ಎರಡು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿ ಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 4 ರಿಂದ 6 ರವರೆಗೆ ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಖಂಡ 4 ರಿಂದ 6 ರವರೆಗೆ ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 4 ರಿಂದ 6 ರವರೆಗೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 7 ರಿಂದ 9 ರವರೆಗೆ

ಅಧ್ಯಕ್ಷರು : "ಖಂಡ 7 ರಿಂದ 9 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 7 ರಿಂದ 9 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಮೊದಲನೆಯದು ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕದ ಭಾಗವಾ ಗಿರುತ್ತವೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕರ್ನಾಟಕ ಅತ್ಯವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ ತಿದ್ದುಪಡಿಯಾಗಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2009ನೇ ಸಾಲಿನ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ ತಿದ್ದುಪಡಿಯಾಗಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ತಿದ್ದುಪಡಿಯಾಗಿರುವಂತೆ ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅನುಬಂಧ–4

ಉ) ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2009.

ಪರ್ಯಾಲೋಚನಾ ಪ್ರಸ್ತಾವ

ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಈಗ ಬಿಲ್ ಬಗ್ಗೆ ವಿವರಣೆ ನೀಡಿ.

ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು ಸಣ್ಣ ತಿದ್ದುಪಡಿ. Supreme Courtನ ನಿರ್ದೇಶನದ ಪ್ರಕಾರ, ಶ್ರೀ ಎಸ್.ಜಿ. ಬಂಡಿ, ವಿಭಾಗೀಯ ಸಾರಿಗೆ ಅಧಿಕಾರಿ ವಿರುದ್ಧ ಈ ಒಂದು